ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ

ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ. 2122/2022</u>

............................ ವಿರುದ್ಧ ............................

ಫ್ರಾಸಾ- 01

ಚಾಸಾ- 01

ಹೆಸರು ಃ ಪ್ರತಿಕ್ಷಾ ಪಾಂಡುರಂಗ ದೇಸಾಯಿ

ತಂದೆಯ ಹೆಸರು ಃ ಪಾಂಡುರಂಗ ದೇಸಾಯಿ

ವಯಸ್ಸು ಃ 38 ವರ್ಷ

ಉದ್ಯೋಗ ಃ ಗೃಹಿಣಿ

ವಾಸ ಃ ಬಾಪೆಲಿ, ಜೊಯಿಡಾ

(ಸಾಕ್ಷಿಗೆ ಹಿಂದಿ ಹಾಗೂ ಮರಾಠಿ ಭಾಷೆ ಮಾತ್ರ ಗೊತ್ತಿರುವುದರಿಂದ ಕನ್ನಡ ಭಾಷೆಯಲ್ಲಿ ಕೇಳುವ ಪ್ರಶ್ನೆಗಳನ್ನು ಸಾಕ್ಷಿಗೆ ಹಿಂದಿ ಭಾಷೆಗೆ ಭಾಷಾಂತರಿಸಿ ಸಾಕ್ಷಿ ಹಿಂದಿ ಭಾಷೆಯಲ್ಲಿ ಹೇಳುವ ಉತ್ತರವನ್ನು ಕನ್ನಡ ಭಾಷೆಗೆ ಭಾಷಾಂತರಿಸಲು ಶ್ರೀಮತಿ. ರತ್ನ ದೀಪಾ, ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು)

ದಿನಾಂಕಃ 10-10-2024 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .

**<u>ಮುಖ್ಯ ವಿಚಾರಣೆ. ಎ. ಪಿ. ಪಿ. ವಕೀಲರಿಂದ</u>**

ಚಾಸಾ 5 ನನ್ನ ಪತಿ. ದಿನಾಂಕಃ 07-02-2022 ರಂದು ರಾತ್ರಿ 10.00 ಗಂಟೆಗೆ ಯಾರದೊ ಆಕಲು ನಮ್ಮ ಹತ್ತಿರ ಬಂದಿದ್ದು, ಅದನ್ನು ಒಡಿಸಲು ನನ್ನ ಮಗನಿಗೆ ತಿಳಿಸಿದ್ದು, ಆತನು ಹೋಗದೆ ಇದ್ದ ಕಾರಣ ನಾನೇ ಹೊರಗೆ ಹೋಗಿ ನೇಡಲಾಗಿ ಆರೊಪಿ ಹಾಗೂ ಚಾಸಾ 4 ರವರು ಹೋಗುತ್ತಿದ್ದು , ಅವರಿಗೆ ಆಕಳನ್ನು ಒಡಿಸಲು

ಹೇಳಿರುತ್ತೇನೆ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ರಾಂಡೆ, ವಿತುಮಗೇಕ ಬಾಪಾಚೆ ನೌಕರ ಅಸಾ ಕೈ ಎಂದು ಕೊಂಕಣಿ ಯಲ್ಲಿ ಬೈದು ಮತ್ತು ಗೇಟಿಗೆ ಇದ್ದ ಬಿದರಿನಿಂದ ಕೊಲನ್ನು ತೆಗೆದು ಮನೆಯ ಒಳಗೆ ಬಂದು ನನ್ನ ಮೈಕೈಗೆ ಹೊಡೆದಿರುತ್ತಾರೆ. ನಂತರ ನಾನು ಹೊದಕ್ಕೆ ಬಂದಿರುತ್ತೇನೆ. ನಂತರ ನೀರು ಕೊಟ್ಟ ಬಳಿಕ ನಾನು ಎದ್ದಿರುತ್ತೇನೆ. ನನ್ನ ಗಂಡ ನಾಲ್ಕು ಮನೆಗಳನ್ನು ದಾಟಿ ಬೇರೆಯವರ ಮನೆಯಲ್ಲಿ ಇದ್ದು, ನಾನು ಅವರಿಗೆ ಹೋಗಿ ವಿಷಯವನ್ನು ತಿಳಿಸಿರುತೇನೆ. ನಂತರ ಅವರು ಆರೊಪಿಗೆ ಹೋಗಿ ವಿಚಾರಿಸಕಾಗಿ ಅವರಿಗೂ ಹಲ್ಲೆ ಮಾಡಿರುತ್ತಾನೆ. ನಂತರ ಪೊಲಿಸ ಠಾಣೆಗೆ ಕರೆ ಮಾಡಿ ತಿಳಿಸಿರುತ್ತೇನೆ. ಮರು ದಿನ ಪೊಲೀಸರು ಬಂದು ನನ್ನನ್ನು ಹಾಗೂ ಚಾಸಾ 5 ರವರನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ವಿಚಾರವಾಗಿ ನಾನು ಪೊಲಿಸರಿಗೆ ದೂರನ್ನು ನೀಡಿರುತ್ತೇನೆ. ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ 1 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ದಿನಾಂಕಃ 09-02-2022 ರಂದು ಪೊಲೀಸರು ನಾನು ಘಟನಾಸ್ಥಳ ತೋರಿಸಿದ ಮೇರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಹಲ್ಲೆಗೆ ಉಪಯೋಗಿಸಿದ ಕಟ್ಟಗೆಯನ್ನು ನಾನು ಹಾಜರುಪಡಿಸಿದ ಮೇರೆಗೆ ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ಈಗಾ ನಿಪಿ 2 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

ಹಾಗೂ ಪಂಚನಾಮೆ ಕಾಲಕ್ಕೆ ಪೊಟೊಗಳನ್ನು ತೆಗೆದಿರುತ್ತಾರೆ. ಹಾಗೂ ಕಚ್ಚಾ ನಕಾಶೆಯನ್ನು ತೆಗೆದಿರುತ್ತಾರೆ. ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ 3 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ. ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ

ಮು. ಮಾ 1 ಎಂದು  ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ. ಎಂ.ಸಿ.ಎಚ. ವಕೀಲರಿಂದಃ ಸಮಯ ಕೊರಿದ್ದು, ಸಮಯ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ